ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ನಾವು 3220 ಕೋಟಿ ರೂಪಾಯಿಗಳಿಗೆ ಎಂದು ಕೊಟ್ಟಿದ್ದೆವು. ಮಾನ್ಯ ಮುಖ್ಯಮಂತ್ರಿಯವರು ಅದರ ಕೂಲಂಕುಷ ಪರಿಶೀಲನೆ ಮಾಡಿ ಯೋಜನಾ ಇಲಾಖೆಯ ಉಪಾಧ್ಯಕ್ಷರು ಏನಿದ್ದಾರೆ ಅವರು ಇನ್ನೂ ಹೆಚ್ಚಿಗೆ ಕೊಡುತ್ತೇವೆ ಎಂದು ಹೇಳಿ, 3275 ಕೋಟಿಗಳಿಗೆ ನಮ್ಮ 1994-95ನೇ ಸಾಲಿನ ಯೋಜನೆ ವೆಚ್ಚವನ್ನು ನಿಗದಿ ಮಾಡಿದ್ದಾರೆ.

ಶ್ರೀ ಎಂ.ವಿ. ವೆಂಕಟಪ್ಪ : ಇದರಲ್ಲಿ ಮೈದಾನ ಏರಿಯ ಡೆವಲಪ್ಮೆಂಟ್ ಬೋರ್ಡ್ ಎಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ತಾವು ಸೇರಿ ಹೇಳಿದ್ದೀರಿ. ಇದರ ಬಗ್ಗೆ ತಾವುಗಳು ಏನಾದರೂ ಆಲೋಚನೆ ಮಾಡಿ ನಾಳೆ ಬಜೆಟ್ನಲ್ಲಾದರೂ ಒಂದಿಷ್ಟು ಹಣವನ್ನು ಇಡುವುದಕ್ಕೆ ವಿಪ್ಪಾಡು ಮಾಡುತ್ತೀರಾ?

ಶ್ರೀ ಟಿ.ಎಂ. ಮಂಜುನಾಥ್ : ಮುಖ್ಯಮಂತ್ರಿಯವರು ಈಗಾಗಲೇ ಆ ಬಗ್ಗೆ ಭರವಸೆಯನ್ನು ಕೊಟ್ಟಿದ್ದಾರೆ. ಆದ್ಯತೆಯನ್ನೂ ಕೊಟ್ಟಿದ್ದಾರೆ. ಈ ಬೋರ್ಡನ್ನು ಮಾಡುವುದಕ್ಕೋಸ್ಕರ ಮುಂದಿನ ಆಯವ್ಯಯದಲ್ಲಿ ಹಣವನ್ನು ಇಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ : ಒಂದು ಶಾಸನಬದ್ಧವಾದಂಥ ಸ್ವರೂಪವನ್ನು ಅದಕ್ಕೆ ಕೊಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಹೋದ ಸಾರಿ ನಾವು ಭೇಟಿಯಾದಾಗ ಅದರ ಬಿಲ್ಲನ್ನು ತರುತ್ತಾ ಇದ್ದೇವೆ, ಎಲ್ಲಾ ತಯಾರಿದೆ ಎಂಬ ಮಾತನ್ನು ಹೇಳಿದ್ದರು. ಅದು ಈಗ ಯಾವ ಹಂತದಲ್ಲಿ ಇದೆ? ಅಥವಾ ಹೀಗೆ ಹೇಳುತ್ತಾ ಕಾಲವನ್ನು ಕಳೆಯುತ್ತಾರೋ? ಅಥವಾ ಅದನ್ನು ಕಾರ್ಯರೂಪದಲ್ಲಿ ತರತಕ್ಕಂಥಾದ್ದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತಾರೋ ಎಂಬ ಬಗ್ಗೆ ಹೇಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಮುಖ್ಯಮಂತ್ರಿಯವರು ತಮ್ಮೆಲ್ಲರನ್ನೂ ಕರೆಸಿ ಮೈದಾನ ಏರಿಯಾಕ್ಕೆ ಸಂಬಂಧಪಟ್ಟಂಥ ವಿಧಾನ ಸಭೆ, ವಿಧಾನ ಪರಿಷತ್ತು ಮತ್ತು ಪಾರ್ಲಿಮೆಂಟ್ನ ಎಲ್ಲಾ ಸದಸ್ಯರುಗಳನ್ನು ಕರೆಸಿ, ತಮ್ಮ ಎಲ್ಲಾ ಅನಿಸಿಕೆಗಳನ್ನು ತಿಳಿದುಕೊಂಡು ಇದನ್ನು ಕೂಡಲೇ ಜಾರಿಗೆ ತರಬೇಕೆನ್ನುವ ಕಾತುರತೆಯು ನಿಮಗಿಂತಲೂ ಹೆಚ್ಚಿಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಇದೆ. ಅದನ್ನು ತರುತ್ತೇವೆ ಎಂಬ ಉದ್ದೇಶದಿಂದಲೇ ಆ ಮಾತನ್ನು ತಮಗೆ ಹೇಳಿರತಕ್ಕಂಥಾದ್ದು. ಈ ಆಯವ್ಯಯದಲ್ಲಿಯೇ ಅದನ್ನು ತಂದೇ ತರುತ್ತೇವೆ.

ಸಿ.ಒ.ಡಿ.ಗೆ ವಹಿಸಿರುವ ಪ್ರಕರಣಗಳ ಕುರಿತು

15 -ಶ್ರೀ ಗುರುಪಾದಪ್ಪ ನಾಗಮಾರಪಲಳ್ಳಿ (ಔರಾದ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 4 ವರ್ಷಗಳಲ್ಲಿ ರಾಜ್ಯ ಪತ್ತೆದಾರಿ ದಳ (ಸಿ.ಒ.ಡಿ) ಕ್ಕೆ ಯಾವ ಯಾವ ಪ್ರಕರಣಗಳನ್ನು ತನಿಖೆ ನಡೆಸುವ ಸಲುವಾಗಿ ನೀಡಲಾಗಿದೆ.

ಆ) ಅವುಗಳಲ್ಲಿ ಇದುವರೆವಿಗೆ ಎಷ್ಟು ಪ್ರಕರಣಗಳಿಗೆ 'ಬಿ' ವರದಿಗಳನ್ನು ಸಲ್ಲಿಸಲಾಗಿದೆ. ಹಾಗೂ ಅಂತಹ ಪ್ರಕರಣಗಳ ವಿವರಗಳೇನು

ಇ) ಮೇಲ್ಕಂಡ ಅವಧಿಯಲ್ಲಿ ನೀಡಲಾದ ಎಷ್ಟು ಪ್ರಕರಣಗಳಿಗೆ ನ್ಯಾಯಾಲಯಗಳಿಂದ ಸಿ.ಒ.ಡಿ.ಗೆ ಪರವಾದ ತೀರ್ಪು ಬಂದಿದೆ ಹಾಗೂ ಎಷ್ಟಕ್ಕೆ ಸಿ.ಒ.ಡಿ.ಗೆ ವಿರುದ್ಧವಾದ ತೀರ್ಪುಗಳು ಬಂದಿವೆ?
(ಈ ಪ್ರಕರಣಗಳ ವಿವರಗಳನ್ನು ಒದಗಿಸುವುದು)

ಈ) ಸಿ.ಒ.ಡಿ.ಗೆ ವಿರುದ್ಧವಾಗಿ ಬಂದಿರುವ ಯಾವ ಯಾವ ಪ್ರಕರಣಗಳ ತೀರ್ಪುಗಳ ಮೇಲೆ ಮೇಲ್ಮನವಿಯನ್ನು ಸಲ್ಲಿಸಲಾಗಿದೆ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) 6779 ಪ್ರಕರಣಗಳು

(1-1-90 ರಿಂದ 31-12-93ರವರೆಗೆ)

ಆ) 41 ಪ್ರಕರಣಗಳು.

(ವಿವರಗಳನ್ನು ಅನುಬಂಧ-ಎ ನಲ್ಲಿ ನೀಡಲಾಗಿದೆ.)

ಇ) 9 ಪ್ರಕರಣಗಳಲ್ಲಿ ಸಿಒಡಿ ಪ್ರರವಾಗಿ ತೀರ್ಪು ಬಂದಿದೆ. 30 ಪ್ರಕರಣಗಳಲ್ಲಿ ಸಿಒಡಿ ವಿರುದ್ಧವಾಗಿ ತೀರ್ಪು ಬಂದಿದೆ.

(ವಿವರಗಳನ್ನು ಅನುಬಂಧ ಬಿ ಭಾಗ I ಮತ್ತು II ರಲ್ಲಿ ನೀಡಲಾಗಿದೆ)

ಈ) 2 ಪ್ರಕರಣಗಳಲ್ಲಿ ಮೇಲ್ಮನವಿಯನ್ನು ಸಲ್ಲಿಸಲಾಗಿದೆ. (ವಿವರಗಳನ್ನು ಅನುಬಂಧ ಸಿನಲ್ಲಿ ನೀಡಲಾಗಿದೆ)

ಅನುಬಂಧ- ಎ

(ಅ) 'ಬಿ' ವರದಿಗಳನ್ನು ಸಲ್ಲಿಸಿರುವ ಪ್ರಕರಣಗಳ ವಿವರಗಳು.

1990

(1) ಸಂಪಂಗಿರಾಮನಗರ ಪೊಲೀಸ್ ಠಾಣೆ, ಅ.ಸಂ.:169:90, ಕಲಂ:306 ಭಾರತೀಯ ದಂಡ ಸಂಹಿತೆ.

ಈ ಪ್ರಕರಣವು ಪೊಣಚ್ಚ ಎಂಬ ವಿದ್ಯಾರ್ಥಿಯು ಮೃತಪಟ್ಟ ಬಗ್ಗೆ (ವಿಷ ಸೇವನೆಯಿಂದ) ದಾಖಲಾಗಿರುತ್ತದೆ. ತನಿಖೆಯಿಂದ ಮೃತನು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದು ದೃಢಪಟ್ಟಿರುವುದರಿಂದ ನ್ಯಾಯಾಲಯಕ್ಕೆ 'ಬಿ' ವರದಿಯನ್ನು ಸಲ್ಲಿಸಲಾಗಿದೆ.

(2) ಗಾಂಧಿನಗರ ಪೊಲೀಸ್ ಠಾಣೆ, ಯುಡಿಆರ್ ಸಂಖ್ಯೆ : 7:90, ಕಲಂ 174 ದಂಡ ಪ್ರಕ್ರಿಯ ಸಂಹಿತೆ.

ಈ ಪ್ರಕರಣವು ಅಸ್ಲಾಂ ಪಾಷ ಎಂಬುವವರ ಸಾವಿನ ಬಗ್ಗೆ ದಾಖಲಾಗಿರುತ್ತದೆ ತನಿಖೆಯಿಂದ ಮೃತನು ಸ್ವಾಭಾವಿಕ ಸಾವನ್ನಪ್ಪಿರುವುದು ತಿಳಿದು ಬಂದಿದ್ದರಿಂದ 'ಬಿ' ಅಂತಿಮ ವರದಿ ಸಲ್ಲಿಸಲಾಗಿದೆ.

(3) ಪಣಂಬೂರು ಪೊಲೀಸ್ ಠಾಣೆ ಯುಡಿಆರ್ ಸಂಖ್ಯೆ : 18:90 ಕಲಂ 174 ದಂಡ ಪ್ರಕ್ರಿಯೆ ಸಂಹಿತೆ.

ಈ ಪ್ರಕರಣದಲ್ಲಿ ಮೃತಪಟ್ಟ ಕುಮಾರಿ ಬೀನಾ ಕುಶಾಲಪ್ಪ ನೀರಿನಲ್ಲಿ ಮುಳುಗಿ ಉಸಿರುಕಟ್ಟಿ ಸತ್ತಿರುವುದು ತನಿಖೆಯಿಂದ ತಿಳಿದು ಬಂದಿದ್ದರಿಂದ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(4) ಹೊಸನಗರ ಪೊಲೀಸ್ ಠಾಣೆ, ಅಪರಾಧ ಸಂಖ್ಯೆ :137:90, ಕಲಂ 302, ಭಾರತೀಯ ದಂಡ ಸಂಹಿತೆ.

ಈ ಪ್ರಕರಣವು ಸುರತ್ಕಲ್ ವಾಸಿ ಅಬ್ಬು ಅಲಿಯಾಸ್ ಹುಸೇನ್ ಎಂಬುವರ ಅಸಹಜ ಸಾವಿನ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಮೃತನು ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಸತ್ತಿರುತ್ತಾನೆಂದು ತಿಳಿದು ಬಂದಿದ್ದರಿಂದ 'ಬಿ' ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

(5) ಕೋಡಿಹಳ್ಳಿ ಪೊಲೀಸ್ ಠಾಣೆ, ಅಪರಾಧ ಸಂಖ್ಯೆ :54:90 ಕಲಂ 302, 309 ಭಾರತೀಯ ದಂಡ ಸಂಹಿತೆ.

ಈ ಪ್ರಕರಣದಲ್ಲಿ ಮೃತ ಚಂದ್ರಪ್ಪನು ಬಂದೂಕಿನ ಭಯೋನೇಟ್ನಿಂದ ಹೊಟ್ಟೆಗೆ ತಿವಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆಂದು ತನಿಖೆಯಿಂದ ಹೊರಪಟ್ಟಿದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(6) ಮುಳಬಾಗಿಲು ಪೊಲೀಸ್ ಠಾಣೆ, ಅಪರಾಧ ಸಂಖ್ಯೆ : 412:90 ಕಲಂ 302 ಭಾರತೀಯ ದಂಡ ಸಂಹಿತೆ

ಈ ಪ್ರಕರಣವು ನಾರಾಯಣಸ್ವಾಮಿ ಎಂಬುವವರ ಸಾವಿನ ಬಗ್ಗೆ ದಾಖಲಾಗಿರುತ್ತದೆ. ತನಿಖೆಯ ಕಾಲದಲ್ಲಿ ಮೃತನು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆಂದು ತಿಳಿದು ಬಂದಿದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(7) ತರೀಕೆರೆ ಪೊಲೀಸ್ ಠಾಣೆ, ಯುಡಿಆರ್ ಸಂಖ್ಯೆ :33: 90 ಕಲಂ 174 ದಂಡ ಪ್ರಕ್ರಿಯೆ ಸಂಹಿತೆ.

ಈ ಪ್ರಕರಣವು ರಮೇಶ್ ಎಂಬುವನು ಸಾವಿಗೆ ಸಂಬಂಧಪಟ್ಟಂತೆ ದಾಖಲಾಗಿರುತ್ತದೆ. ಮೃತನು ತನ್ನ ತೊಡೆಗೆ ಆಕಸ್ಮಿಕವಾಗಿ ಬಿದ್ದ ಏಟಿನಿಂದ ಉಂಟಾದ ತೊಂದರೆಗಳಿಂದ ಸತ್ತಿರುತ್ತಾನೆಂದು ತಿಳಿದು ಬಂದಿದ್ದರಿಂದ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(8) ತಿಪಟೂರು ಠಾಣೆ ಯುಡಿಆರ್ ಸಂಖ್ಯೆ : 13:90 ಕಲಂ 174 ಭಾರತೀಯ ದಂಡ ಸಂಹಿತೆ. ಈ ಪ್ರಕರಣವು ಸಾಬ್ಜಾನ್ ಎಂಬುವರು ಮೃತಪಟ್ಟ ಬಗ್ಗೆ ದಾಖಲಾಗಿದ್ದು ಮೃತನು ಹೃದಯಾಘಾತದಿಂದ ಸತ್ತಿರುತ್ತಾನೆಂದು ತನಿಖೆಯಿಂದ ತಿಳಿದು ಬಂದಿದ್ದರಿಂದ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(9) ಬ್ರಹ್ಮಾವರ ಠಾಣೆ, ಅಪರಾಧ ಸಂಖ್ಯೆ : 18:90, ಕಲಂ 302 ಭಾರತೀಯ ದಂಡ ಸಂಹಿತೆ.

ಈ ಪ್ರಕರಣವು ಮಲ್ಲಿಕಾರ್ಜುನ ಅಲಿಯಾಸ್ ಮಲ್ಲು ಎಂಬುವರ ಸಾವಿನ ಬಗ್ಗೆ ದಾಖಲಾಗಿರುತ್ತದೆ. ಮೃತನು ಪೊಲೀಸ್ ಅಭಿರಕ್ಷೆಯಲ್ಲಿ ಸತ್ತಿರುವುದಾಗಿರುತ್ತದೆ. ತನಿಖೆಯಿಂದ ಮೃತನು ಹೃದಯಾಘಾತದಿಂದ ಸತ್ತಿರುವುದು ದೃಢಪಟ್ಟಿರುವುದರಿಂದ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(10)ಸಾಗರ ಪೊಲೀಸ್ ಠಾಣೆ ಯುಡಿಆರ್ ಸಂಖ್ಯೆ :26 :89 ಕಲಂ 174 ದಂಡ ಪ್ರಕ್ರಿಯೆ ಸಂಹಿತೆ.

ಈ ಪ್ರಕರಣವು ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಕೂಗುವಿನ ಹಳ್ಳಿ ಗ್ರಾಮದ ಗಣಪತಿ ಎನ್ನುವವರ ಸಾವಿನ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಮೃತನು ಸಹಜ ಸಾವನ್ನು ಅಪ್ಪಿರುವುದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

11) ಮಾಗಡಿ ರಸ್ತೆ ಪೊಲೀಸ್ ಠಾಣೆ ಅಪರಾಧ ಸಂಖ್ಯೆ : 5:90ಕಲಂ 498 (ಎ) ಭಾ.ದಂ.ಸಂ.

ಈ ಪ್ರಕರಣವು ಶ್ರೀಮತಿ ಸರೋಜಮ್ಮ ಎನ್ನುವವರು ತನ್ನ ಮಗಳಾದ ಶ್ರೀಮತಿ ರಾಣಿಗೆ ಆಕೆಯ ಗಂಡ ರಾಜೇಂದ್ರನಾಯ್ಡು ಕಿರುಕುಳ ಕೊಟ್ಟು ಪ್ರಾಣ ಭಯ ಉಂಟು ಮಾಡಿರುತ್ತಾನೆಂದು ಕೊಟ್ಟ ದೂರಿನ ಮೇಲೆ ದಾಖಲಾಗಿರುತ್ತದೆ. ತನಿಖೆಯ ಕಾಲದಲ್ಲಿ ಆರೋಪವನ್ನು ಸಾಬೀತುಗೊಳಿಸುವಂತಹ ಸಾಕ್ಷಿದಾರಗಳು ದೊರಕದೆ ಇದ್ದುದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

12) ಹುಬ್ಬಳ್ಳಿ ಸಬ್ಬರ್ಬನ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ : 256:90, ಕಲಂ 465,477, 420 ಮತ್ತು 511 ಭಾರತೀಯ ದಂಡ ಸಂಹಿತೆ.

ಈ ಪ್ರಕರಣವು ಹುಬ್ಬಳ್ಳಿಯಲ್ಲಿ ಧಾರವಾಡ ಜಿಲ್ಲಾ ನೇಕಾರರ ಮಹಾ ಮಂಡಲ

ರೂ. 18,36,890-00ನ್ನು ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ ಎಂಬ ದೂರಿನ ಮೇಲೆ ದಾಖಲು ಮಾಡಲಾಗಿದೆ. ತನಿಖೆಯ ಕಾಲದಲ್ಲಿ ಸಾಕ್ಷಾಧಾರಗಳು ದೊರಕದೆ ಇದ್ದುದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

13) ತಲಘಟ್ಟಪುರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ : 126:90 ಕಲಂ 379,ಭಾ.ದಂ.ಸಂ. ಮತ್ತು 39 ಕರ್ನಾಟಕ ವಿದ್ಯುಚ್ಛಕ್ತಿ ಕಾಯಿದೆ.

ಈ ಪ್ರಕರಣವು ಕನಕಪುರ. ರಸ್ತೆಯಲ್ಲಿರುವ ಯುನೈಟೆಡ್ ಗ್ಲಾಸ್ ಬಾಟಲ್ಸ್ ಕಂಪನಿಯವರು ವಿದ್ಯುಚ್ಛಕ್ತಿಯನ್ನು ಕಳ್ಳತನದಲ್ಲಿ ಉಪಯೋಗಿಸುತ್ತಿದ್ದಾರೆಂಬ ದೂರಿನ ಮೇಲೆ ದಾಖಲಾಗಿರುತ್ತದೆ. ತನಿಖೆಯ ಕಾಲದಲ್ಲಿ ಸದರಿ ಕಂಪನಿಗೆ ವಿದ್ಯುಚ್ಛಕ್ತಿ ಮಂಡಲಿಯವರು ಜೋಡಿಸಿದ್ದ ವಿದ್ಯುಚ್ಛಕ್ತಿ ಮೀಟರುಗಳು ದೋಷಯುಕ್ತವಾದವುಗಳು ಎಂದು ತಿಳಿದು ಬಂದಿದ್ದರಿಂದ 'ಬಿ' ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

1991

(1)ಬೆಳ್ತಂಗಡಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ : ಯುಡಿಆರ್ 4:91 ಕಲಂ 174 ದಂ.ಪ್ರ.ಸಂ.

ಈ ಪ್ರಕರಣವು ಕುಂಜಪ್ಪಗೌಡರ ಸಾವಿನ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಮೃತನು ಜೀವನದಲ್ಲಿ ಜಿಗುಪ್ಸೆ ಹೊಂದಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆಂದು ತಿಳಿದು ಬಂದಿದ್ದರಿಂದ 'ಬಿ' ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

(2) ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ :383:90 ಕಲಂ 302 ಭಾ.ದಂ.ಸಂ.

ಈ ಪ್ರಕರಣವು ಚನ್ನಪಟ್ಟಣ ತಾಲ್ಲೂಕು, ಬೊಮ್ಮನಾಯಕನ ಹಳ್ಳಿ ಗ್ರಾಮದ ಶ್ರೀಮತಿ ಲಕ್ಷ್ಮಮ್ಮ ಎಂಬುವವರ ಸಾವಿನ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಮೃತಳು ಕಾಯಿಲೆಯಿಂದ ಮೃತಪಟ್ಟಿರುತ್ತಾಳೆಂದು ತಿಳಿದು ಬಂದಿದ್ದರಿಂದ 'ಬಿ' ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

(3) ಮೈಕೋ ಲೇಔಟ್ ಪೊಲೀಸ್ ಠಾಣೆ, ಅಪರಾಧ ಸಂಖ್ಯೆ :66:91 ಕಲಂ 302 ಭಾ.ದಂ.ಸಂ.

ಈ ಪ್ರಕರಣವು ವಿರಾಜಪೇಟೆ ತಾಲ್ಲೂಕು ಹೊಸಕೋಟೆ ಗ್ರಾಮದ ಅಪ್ಪಣ್ಣ ಎನ್ನುವವರ ಸಂಶಯಾತ್ಮಕ ಸಾವಿನ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಮತ್ತು ವೈದ್ಯಕೀಯ ಸಾಕ್ಷ್ಯಾಧಾರಗಳಿಂದ ಮೃತನು ಕೊಲೆ ಮಾಡಲಾಗಿದೆ ಎಂಬ ಆಪಾದನೆ ಸ್ಥಿರಪಟ್ಟಿಲ್ಲವಾದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(4)ಚಿಕ್ಕಪೇಟೆ ಪೊಲೀಸ್ ಠಾಣೆ ಅಪರಾಧ ಸಂಖ್ಯೆ :76:91, ಕಲಂ 302 ಭಾ.ದಂ.ಸಂ.

ಈ ಪ್ರಕರಣವು ಶ್ರೀಮತಿ ಶಿಲ್ಪ ಎನ್ನುವವರ ಅನುಮಾನಾಸ್ಪದ ಸಾವಿನ ಬಗ್ಗೆ ದಾಖಲಾಗಿರುತ್ತದೆ.ತನಿಖೆಯಿಂದ ಮೃತಳು ಜನ್ಮಗತ ನ್ಯೂನ್ಯತೆಯಿಂದ ಮೆದುಳಿನಲ್ಲಿ ಸಂಭವಿಸಿದ ರಕ್ತಸ್ರಾವದಿಂದ ಸಾವನ್ನಪ್ಪಿರುತ್ತಾಳೆಂದು ತಿಳಿದು ಬಂದಿದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(5)ಹನುಮಂತನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:87: 91 ಕಲಂ 448 ಭಾ.ದಂ.ಸಂ.

ಈ ಪ್ರಕರಣವು ಶಾಮಾಚಾರಿ ಎಂಬುವವರನ್ನು ಹನುಮಂತನಗರ ಠಾಣೆಗೆ ಕಳವಿನ ಆರೋಪದ ಮೇಲೆ ಕರೆತಂದಿದ್ದಾಗ ಆತನು ಮಹಡಿಯಿಂದ ಕೆಳಗೆ ಹಾರಿ ಮೃತಪಟ್ಟ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಮೃತನು ಪೊಲೀಸರ ಪರಿಪ್ರಶ್ನೆಯಿಂದ

ತಪ್ಪಿಸಿಕೊಳ್ಳಲು ತನ್ನಿಂದ ತಾನೇ ಮಹಡಿಯಿಂದ ಹಾರಿ ಮೃತಪಟ್ಟಿರುತ್ತಾನೆಂದು ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(6) ಬಿಡದಿ ಪೊಲೀಸ್ ಠಾಣೆ ಅಪರಾಧ ಯುಡಿಆರ್ ಸಂಖ್ಯೆ:17: 91 ಕಲಂ 174 ಭಾ.ದಂ.ಸಂ.

ಈ ಪ್ರಕರಣವು ಬಿಡದಿ ಪೊಲೀಸ್ ಠಾಣೆಯಲ್ಲಿ ಶಿವ ಎಂಬುವವನು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಮೃತನನ್ನು ಕಳ್ಳತನ ಆರೋಪದ ಮೇಲೆ ಠಾಣೆಗೆ ಕರೆತಂದಿದ್ದು ಆತನು ಠಾಣೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾನೆಂದು ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(7) ಭಟ್ಕಳ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:155: 91 ಕಲಂ 302 ಭಾ.ದಂ.ಸಂ.

ಈ ಪ್ರಕರಣವು ಉತ್ತರ ಕನ್ನಡ ಜಿಲ್ಲೆಯ ಕೈಕಿಣಿ ಗ್ರಾಮದ ಈರಯ್ಯಗೌಂಡ ಎಂಬುವವರನ್ನು ಗುಂಡು ಹಾಕಿ ಕೊಲೆ ಮಾಡಲಾಗಿದೆ ಎಂಬ ಆರೋಪದ ಬಗ್ಗೆ ದಾಖಲಾಗಿದೆ. ತನಿಖೆಯಿಂದ ಮೃತನು ಮೀಸಲು ಅರಣ್ಯದಲ್ಲಿ ಬೇಟೆಗೆ ತನ್ನ ಸಹಚರರ ಜೊತೆಗೆ ಹೋಗಿದ್ದು ಬೇಟೆ ಸಿಗದೆ ವಾಪಸ್ಸು ಬರುವಾಗ ಅರಣ್ಯ ಇಲಾಖೆಯ ಸಿಬ್ಬಂದಿಯವರು ಅವರನ್ನು ದಸ್ತಗಿರಿ ಮಾಡಲು ಪ್ರಯತ್ನಿಸಿದಾಗ ಆಕಸ್ಮಿಕವಾಗಿ ಮೃತನ ಕೈಯಲ್ಲಿದ್ದ ಬಂದೂಕಿನಿಂದ ಗುಂಡು ಹಾರಿ ಮೃತಪಟ್ಟಿರುತ್ತಾನೆಂದು ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(8)ದೇವನಹಳ್ಳಿ ಪೊಲೀಸ್ ಠಾಣೆ ಯು ಡಿ ಆರ್ ಸಂಖ್ಯೆ:3: 91 ಕಲಂ 174 ಭಾ.ದಂ.ಸಂ.

ಈ ಪ್ರಕರಣವು ಶ್ರೀಮತಿ ಸರಸ್ವತಮ್ಮ ಎಂಬುವವರ ಸಾವಿನ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಮೃತಳು ಕೌಟುಂಬಿಕ ಕಾರಣಗಳಿಂದಾಗಿ ನೀರಿನಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(9) ಹುಬ್ಬಳ್ಳಿ ಸಬರ್ಬನ್ ಪೊಲೀಸ್ ಠಾಣೆ ಯು ಡಿ ಆರ್ ಸಂಖ್ಯೆ:7: 91 ಕಲಂ 174 ದಂಡ ಪ್ರಕ್ರಿಯೆ ಸಂಹಿತೆ.

ಈ ಪ್ರಕರಣವು ಆರೋಗ್ಯ ಸ್ವಾಮಿ ದಾಸ್ ಕಸ್ತೂರಿ ಎನ್ನುವವರು ಪೊಲೀಸ್ ಬಂಧೀಖಾನೆಯಲ್ಲಿ ನೇಣು ಹಾಕಿಕೊಂಡು ಸತ್ತ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಮೃತನು ನೇಣು ಹಾಕಿಕೊಂಡು ಉಸಿರು ಕಟ್ಟಿ ಸತ್ತಿರುತ್ತಾನೆಂದು ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(10) ಕುದೂರು ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ:23: 91 ಕಲಂ 143, 144, 147, 149, 365, 506 ಭಾ.ದಂ.ಸಂ.

ಈ ಪ್ರಕರಣವು ಶ್ರೀ ಗಂಗಹುಚ್ಚಯ್ಯ ರವರನ್ನು ಆರೋಪಿಗಳು ಅಪಹರಣ ಮಾಡಿರುತ್ತಾರೆಂಬ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಆರೋಪವು ಸುಳ್ಳೆಂದು ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(11)ಹೊಸಕೋಟೆ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:16: 91 ಕಲಂ 279 - 337 ಮತ್ತು 34 ಭಾ.ದಂ.ಸಂ.

ಈ ಪ್ರಕರಣವು ಅಪ್ಪಣ್ಣ ರೆಡ್ಡಿ ಎನ್ನುವ ಮೂರನೇ ವರ್ಷದ ಬಿ.ಇ. ವಿದ್ಯಾರ್ಥಿ ತನ್ನ ಮೋಟಾರು ಸೈಕಲ್ ಸಂಖ್ಯೆ :ಎಂಇಆರ್-1762 ನ್ನು ಅಪಘಾತವನ್ನು ಮಾಡಿರುವ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಅಪ್ಪಣ್ಣರೆಡ್ಡಿಯು ಯಾವುದೇ ಅಪಘಾತ ಮಾಡದೆ ಅಪಘಾತ ಮಾಡಿದಂತೆ ದೃಶ್ಯವನ್ನು ಸೃಷ್ಟಿಸಿ ರಕ್ತ ಬ್ಯಾಂಕಿನಿಂದ ಕೊಂಡುಕೊಂಡು

ಸ್ಥಳದಲ್ಲಿ ಚಿಲ್ಲಿ ತಲೆಮರೆಸಿಕೊಂಡಿದ್ದನು. ಇದಕ್ಕೆ ಕಾರಣ ಆತನು ಬಿ.ಇ. ತರಗತಿಯನ್ನು ಅನುತ್ತೀರ್ಣರಾಗಿರುವುದು. ಇದರಿಂದ 'ಬ' ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

12) ಗೋಣಿಕೊಪ್ಪ ಪೋಲೀಸ್ ಠಾಣೆ ಅಪರಾಧ ಸಂಖ್ಯೆ : 22:90, ಕಲಂ 427-429 ಭಾರತೀಯ ದಂಡ ಸಂಹಿತೆ.

ಈ ಪ್ರಕರಣವು ಶ್ರೀ ಕರುಂಬಯ್ಯ ಎನ್ನುವವರು ಮರಕ್ಕೆ ಕಟ್ಟಿಹಾಕಿದ ಸಾಕು ಆನೆಯ ಮೇಲೆ ಗುಂಡು ಹಾರಿಸಿದ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಆರೋಪಿ ಕರುಂಬಯ್ಯನವರು ಕತ್ತಲೆಯಲ್ಲಿ ಸದರಿ ಆನೆಯನ್ನು ಕಾಡಾನೆ ಎಂದು ತಿಳಿದು ಗುಂಡು ಹಾರಿಸಿದ್ದು ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

1992

(1) ಹಾರೋಹಳ್ಳಿ ಪೊಲೀಸ್ ಠಾಣೆ ಯುಡಿಆರ್ ಸಂಖ್ಯೆ:1: 92 ಕಲಂ 174 ಭಾ.ದಂ.ಸಂ.

ಈ ಪ್ರಕರಣವು ಗಿರೀಶ ಅಲಿಯಾಸ ಗಿರಿಯ ಎನ್ನುವವರ ಮರಣದ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಮೃತನು ನೇಣುಹಾಕಿಕೊಂಡು ಉಸಿರು ಕಟ್ಟಿ ಸತ್ತಿರುವುದಾಗಿ ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(2) ಚಿತ್ರದುರ್ಗ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:19: 92 ಕಲಂ 304(ಎ) ಭಾ.ದಂ.ಸಂ.

ಈ ಪ್ರಕರಣವು ಬಿ.ಕೆ. ಉಮೇಶ ಎಂಬ ಶಾಲಾ ಬಾಲಕನು ಮೃತಪಟ್ಟ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಮೃತನು ಈಜಲು ಹೋಗಿ ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಉಸಿರುಕಟ್ಟಿ ಸತ್ತಿರುವುದಾಗಿ ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(3) ಮದ್ದೂರು ಪೊಲೀಸ್ ಠಾಣೆ ಅಪರಾಧ ಸಂಖ್ಯೆ:32: 92 ಕಲಂ 302 ಭಾ.ದಂ.ಸಂ.

ಈ ಪ್ರಕರಣವು ಶಿವರಾಜು ಮತ್ತು ಯಶೋಧ ಇವರುಗಳು ಮರಣ ಹೊಂದಿದ ಬಗ್ಗೆ ದಾಖಲಾಗಿರುತ್ತದೆ.ತನಿಖೆಯಿಂದ ಇವರಿಬ್ಬರೂ ಪ್ರೇಮಿಗಳಾಗಿದ್ದು ಮದುವೆಗೆ ಹಿರಿಯ ಮನೆಯವರುಗಳು ಪ್ರತಿಭಟಿಸಿದ್ದುದ್ದರಿಂದ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(4) ಮಾಲೂರು ಪೊಲೀಸ್ ಠಾಣೆ ಯುಡಿ ಆರ್ ಸಂಖ್ಯೆ:17: 92 ಕಲಂ 174 ದಂ. ಪ್ರ. ಸಂ.

ಈ ಪ್ರಕರಣವು ದಯಾನಂದ ಎನ್ನುವವರ ಸಾವಿನ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಮೃತನು ಆಕಸ್ಮಿಕವಾಗಿ ನೀರಿನಲ್ಲಿ ಬಿದ್ದು ಉಸಿರು ಕಟ್ಟಿ ಸತ್ತಿರುವುದಾಗಿ ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(5) ಕಾರ್ಕಳ ಪೊಲೀಸ್ ಠಾಣೆ ಯುಡಿ ಆರ್ ಸಂಖ್ಯೆ:18: 92 ಕಲಂ 174 ದಂ.ಪ್ರ.ಸಂ.

ಈ ಪ್ರಕರಣವು ಶೇಷಪ್ಪ ಹೆಗಡೆ ಎನ್ನುವವರು ಕಾರ್ಕಳ ಸಬ್ ಜೈಲಿನ ಮೂತ್ರಾಲಯದಲ್ಲಿ ನೇಣು ಹಾಕಿಕೊಂಡು ಸತ್ತಿರುವ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಮೃತನು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(6) ಮಲೆಮಹದೇಶ್ವರ ಬೆಟ್ಟ ಪೊಲೀಸ್ ಠಾಣೆ ಯುಡಿ ಆರ್ ಸಂಖ್ಯೆ:1: 92 ಕಲಂ 174 ದಂ. ಪ್ರ. ಸಂ.

ಈ ಪ್ರಕರಣವು ಸಾಧಿಕ್ ಅಲಿ ಎನ್ನುವವರು ಪೊಲೀಸ್ ಬಂಧನದಲ್ಲಿ ಮೃತಪಟ್ಟ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ, ಮೃತನು 'ಡುಯೋಡನಲ್ ಅಲರ್ಜಿ' ಖಡಿಗು

ಹೋಗಿದ್ದರಿಂದ ಮೃತಪಟ್ಟಿರುತ್ತಾನೆಂದು ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(7) ವಿರಾಜಪೇಟೆ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:13: 92 ಕಲಂ 420 ಭಾ.ದಂ.ಸಂ.

ಈ ಪ್ರಕರಣವು ವಿರಾಜಪೇಟೆ ವಲಯ ನಿರೀಕ್ಷಕರಾದ ಶ್ರೀ ಜವಹರ್ರವರು ಸಿ.ಎಂ. ಕಮಲರವರಿಂದ 15 ಲಕ್ಷ ರೂಪಾಯಿ ಬಹುಮಾನ ಬಂದಿದ್ದ ಲಾಟರಿ ಟಿಕೆಟ್ಟನ್ನು ಹಣ ಕೊಡಿಸುವುದಾಗಿ ನಂಬಿಸಿ ಮೋಸಮಾಡಿರುತ್ತಾರೆಂಬ ದೂರಿನ ಮೇಲೆ ದಾಖಲಾಗಿರುತ್ತದೆ. ತನಿಖೆಯಿಂದ ಆರೋಪವು ಸಾಭೀತಾಗದೆ ಇದ್ದುದರಿಂದ 'ಬಿ' ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

(8) ಗೋಣಿಕೊಪ್ಪ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:91: 90 ಕಲಂ 143-504 506-149 ಭಾ.ದಂ.ಸಂ.

ಈ ಪ್ರಕರಣವು ಆರೋಪಿಗಳಾದ ಕರುಂಬಯ್ಯ ಮತ್ತು ಇತರರು ಆಕ್ರಮಕೂಟ ರಚಿಸಿಕೊಂಡು ಫಿರ್ಯಾದಿಯ ಕುಟುಂಬವನ್ನು ನಿರ್ನಾಮಮಾಡುವುದಾಗಿ ಬೆದರಿಕೆ ಹಾಕಿದ ಬಗ್ಗೆ ದಾಖಲಾಗಿರುತ್ತದೆ. ತನಿಖೆಯ ನಂತರ ಆರೋಪವು ಉತ್ಪ್ರೇಕ್ಷೆಯಿಂದ ಕೂಡಿದ್ದೆಂದು ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(9) ನೆಲಮಂಗಲ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:449: 92 ಕಲಂ 498(ಎ) 304 (ಬಿ) ಭಾ.ದಂ.ಸಂ.

ಈ ಪ್ರಕರಣವು ವಾಗ್ದೇವಿ ಎನ್ನುವವರ ವರದಕ್ಷಿಣಿ ಸಾವಿಗೆ ಸಂಬಂಧಿಸಿರುತ್ತದೆ. ತನಿಖೆಯಿಂದ ಮೃತಳ ತಂದೆ ತಾಯಿಗಳು ಮೃತಳಿಗೆ ವರದಕ್ಷಿಣಿ ಬಗ್ಗೆ ಯಾವುದೇ ಕಿರುಕುಳ ಇರಲಿಲ್ಲವೆಂದು ಹೇಳಿರುವುದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

1993

(1) ಕಮಲಾಪುರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:102: 92 ಕಲಂ 18 ಭಾ.ಗುಪ್ತನಿಧಿ ಕಾಯ್ದೆ.

ಈ ಪ್ರಕರಣವು ಹಂಪೆಯ ವಿರೂಪಾಕ್ಷ ದೇವಾಲಯದ ಪಾಣಿಪೀಠ ಹಾಗೂ ವಿಗ್ರಹಗಳನ್ನು ಸ್ಥಾನಪಲ್ಲಟ ಮಾಡಿದುದರ ಬಗ್ಗೆ ದಾಖಲಾಗಿರುತ್ತದೆ. ತನಿಖೆಯಿಂದ ಆರೋಪಗಳು ಅಸಂಜ್ಞೇಯ ಅಪರಾಧವಾದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದ.

(2) ಕುಷ್ಟಗಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:34: 93 ಕಲಂ 376-20 ಹಾಗೂ 34 ಭಾ.ದಂ.ಸಂ.

ಈ ಪ್ರಕರಣವು ಶರಣವ್ವ ಎನ್ನುವ ಅಂಗನವಾಡಿ ಕಾರ್ಯಕರ್ತೆಯ ಮೇಲೆ ಸರ್ಕಾರಿ ಅಧಿಕಾರಿಗಳು ಅತ್ಯಾಚಾರವೆಸಗಿದ್ದಾರೆಂಬ ಆಪಾದನೆಯ ಮೇಲೆ ದಾಖಲಾಗಿರುತ್ತದೆ. ತನಿಖೆಯಿಂದ ಆಪಾದನೆಗಳು ಸುಳ್ಳೆಂದು ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

(3) ಹಾಸನ ಗ್ರಾಮಾಂತರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:25: 92 ಕಲಂ 448, 365, 385, 384, ಭಾ.ದಂ.ಸಂ.

ಈ ಪ್ರಕರಣವು ರಂಗೇಗೌಡ ಎನ್ನುವವರನ್ನು ಆರೋಪಿಗಳಾದ ದೇವೇಗೌಡ ಮತ್ತು ಇತರರು ಅಪಹರಿಸಿರುತ್ತಾರೆಂಬ ದೂರಿನ ಮೇಲೆ ದಾಖಲಾಗಿರುತ್ತದೆ. ತನಿಖೆಯಿಂದ ಆರೋಪ ಸುಳ್ಳೆಂದು ತಿಳಿದುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

4. ಹುಬ್ಬಳ್ಳಿ ಸಬ್ಬರಬನ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ : 35:93, ಕಲಂ 307 ಹಾಗೂ 34 ಭಾ.ದಂ.ಸಂ ಮತ್ತು ಕಲಂ 25 ಭಾ.ಶಸ್ತ್ರ ಕಾಯ್ದೆ.

5. ಹುಬ್ಬಳ್ಳಿ ಸಬ್ಬರ್ಬನ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ : 36:93 ಕಲಂ 307 ಹಾಗೂ 34 ಭಾ.ದಂ.ಸಂ ಮತ್ತು ಕಲಂ 25 ಭಾ. ಶಸ್ತ್ರ ಕಾಯ್ದೆ.

ಮೇಲ್ಕಂಡ ಎರಡು ಪ್ರಕರಣಗಳು ಸಾಂಬಾಜಿ ದಲ್ವಿ ಮತ್ತು ಆತನ ಸಂಗಡಿಗರು ಹಾಗೂ ಅನಿಲ್ ಕುಮಾರ್ ಪಾಟೀಲ್ ಮತ್ತು ಆತನ ಸಂಗಡಿಗರುಗಳ ಮಧ್ಯೆ ನಡೆದಿದೆಯೆನ್ನಲಾದ ಘರ್ಷಣೆಯ ಬಗ್ಗೆ ಪರಸ್ಪರ ದೂರಿನ ಮೇಲೆ ದಾಖಲಾಗಿರುತ್ತದೆ. ತನಿಖೆಯಿಂದ ಎರಡೂ ಪ್ರಕರಣಗಳಲ್ಲಿನ ಆರೋಪಗಳು ಸಾಭೀತಾಗದೆ ಇದ್ದುದರಿಂದ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

6. ಶ್ರೀನಿವಾಸಪುರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ : 4:93 ಕಲಂ 457, 448, 506 ಭಾರತೀಯ ದಂಡ ಸಂಹಿತೆ.

7. ಶ್ರೀನಿವಾಸಪುರ ಪೋಲೀಸ್ ಠಾಣೆ ಅಪರಾಧ ಸಂಖ್ಯೆ : 5:93,ಕಲಂ 498 (ಎ) 506 ಭಾರತೀಯ ದಂಡ ಸಂಹಿತೆ.

ಮೇಲ್ಕಂಡ ಎರಡೂ ಪ್ರಕರಣಗಳು ಕ್ರಮವಾಗಿ ಗಂಡಸು ತನ್ನ ಹೆಂಡತಿಯ ವಿರುದ್ಧ ಮತ್ತು ತನ್ನ ಹೆಂಡತಿ ತನ್ನ ಗಂಡನ ವಿರುದ್ಧ ಸಲ್ಲಿಸಿದ್ದ ದೂರಿನ ಮೇಲೆ ದಾಖಲಾಗಿರುತ್ತದೆ. ತನಿಖೆಯಿಂದ ದಂಪತಿಗಳಲ್ಲಿ ಸಾಮರಸ್ಯ ಇಲ್ಲದೆ ಇದ್ದುದರಿಂದ ತಪ್ಪು ತಿಳುವಳಿಕೆಯಿಂದ ದೂರು ಸಲ್ಲಿಸಿರುತ್ತಾರೆಂದು ತಿಳಿದು ಬಂದಿದ್ದರಿಂದ ಎರಡೂ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ 'ಬ' ವರದಿಗಳನ್ನು ಸಲ್ಲಿಸಲಾಗಿದೆ.

ಅನುಬಂಧ - ಬಿ ಭಾಗ -1

1990 ಸಿಒಡಿ ಪರವಾಗಿ ನೀಡಿರುವ ತೀರ್ಪಿನ ಪ್ರಕರಣಗಳ ವಿವರಗಳು

1. ಬೆಂಗಳೂರು ನಗರ ಹನುಮಂತನಗರ ಪೊಲೀಸ್ ಠಾಣೆ ಅ.ಸಂ 101:90 ಕಲಂ 304 (ಬಿ)ಐಪಿಸಿ

2. ಬೆಂಗಳೂರು ನಗರ ಹನುಮಂತನಗರ ಪೊಲೀಸ್ ಠಾಣೆ ಅ.ಸಂ : 120 :90 ಕಲಂ 304 (ಬಿ) ಐಪಿಸಿ

3. ಬೆಂಗಳೂರು ನಗರ ತಿಲಕ್ ನಗರ ಪೊಲೀಸ್ ಠಾಣೆ ಅಪರಾಧ ಸಂ: 113:90 ಕಲಂ 304 (ಬಿ)ಐಪಿಸಿ

4. ಬೆಂಗಳೂರು ನಗರ ಮೈಕೊ ಲೇಔಟ್ ಪೊಲೀಸ್ ಠಾಣೆ ಅ.ಸಂ.81:90 ಕಲಂ 304 (ಬಿ) ಐಪಿಸಿ

5. ಬೆಂಗಳೂರು ಜಿಲ್ಲೆ ದೇವನಹಳ್ಳಿ ಪೊಲೀಸ್ ಠಾಣೆ ಅ.ಸಂ: 184:90 ಕಲಂ 304 (ಬಿ) ಐಪಿಸಿ

<u>1991</u>

1. ಬೆಂಗಳೂರು ಜಿಲ್ಲೆ ನೆಲಮಂಗಲ ಪೊಲೀಸ್ ಠಾಣೆ ಅ.ಸಂ. 101:91 ಕಲಂ 304 (ಬಿ) ಐಪಿಸಿ

2. ಚಿತ್ರದುರ್ಗ ಜಿಲ್ಲೆ ಚಿಕ್ಕಜೂಜೂರು ಪೊಲೀಸ್ ಠಾಣೆ ಅ.ಸಂ. 107:91 ಕಲಂ 304 (ಬಿ)ಐಪಿಸಿ

3. ತುಮಕೂರು ಜಿಲ್ಲೆ ತಿಪಟೂರು ಪೊಲೀಸ್ ಠಾಣೆ ಅ.ಸಂ : 44: 91 ಕಲಂ 498 (ಎ) 304 (ಬಿ) ಐಪಿಸಿ 3,4 ಡಿಪಿ ಆಕ್ಟ್.

1992

1. ಬೆಂಗಳೂರು ನಗರ ಕಲಾಸಿಪಾಳ್ಯ ಪೊಲೀಸ್ ಠಾಣೆ ಅ.ಸಂ. 99: 92 ಕಲಂ 498 (ಎ) 404 (ಬಿ) ಐಪಿಸಿ.

ಅನುಬಂಧ - ಬಿ ಭಾಗ II

ಸಿಒಡಿ ವಿರುದ್ಧವಾಗಿ ತೀರ್ಪು ಬಂದಿರುವ ಪ್ರಕರಣಗಳು

1990

1. ಬೆಸಗರಹಳ್ಳಿ, ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 2:90 :ಕಲಂ 302 ಭಾದಂಸಂ.
2. ಮಂಡ್ಯ ಪೊಲೀಸ್ ಠಾಣೆ, ಅ.ಸಂ:144:90, ಕಲಂ 143;144, 148,302 ಹಾಗೂ 149 ಭಾದಂಸಂ
3. ಕೋಲಾರ ಟೌನ್ ಪೊಲೀಸ್ ಠಾಣೆ, ಅ.ಸಂ. 162: 90 ಕಲಂ 302 ಭಾದಂಸಂ
4. ಕೋಲಾರ ಟೌನ್ ಪೊಲೀಸ್ ಠಾಣೆ, ಅ.ಸಂ. 164:90. ಕಲಂ302 ಭಾದಂಸಂ.
5. ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆ, ಅ.ಸಂ 184:90 ಕಲಂ 302 ಭಾದಂಸಂ
6. ಮುಳಬಾಗಿಲು ಪೊಲೀಸ್ ಠಾಣೆ ಅ.ಸಂ. 473:90, ಕಲಂ 143-147-149-324 ಭಾದಂಸಂ
7. ಬೆತ್ತಕುಲ ಪೊಲೀಸ್ ಠಾಣೆ ಅ.ಸಂ.:108:90, ಕಲಂ 143-147-148-823-327-30 7-120(ಬಿ) ಹಾಗೂ 149 ಭಾದಂಸು.
8. ಹೈಗ್ರೌಂಡ್ಸ್ ಪೊಲೀಸ್ ಠಾಣೆ ಅ.ಸಂ: 182:90, ಕಲಂ 3,4,5 ಹಾಗೂ 24 ಮತ್ತು 27 ಶಸ್ತ್ರ ಕಾಯಿದೆ.
9. ಮಸ್ಕಿ ಪೊಲೀಸ್ ಠಾಣೆ ಅ.ಸಂ:147:90ಕಲಂ 489 (ಬಿ) ಮತ್ತು (ಸಿ)ಭಾದಂಸಂ
10. ವಿಜಯನಗರ ಪೊಲೀಸ್ ಠಾಣೆ, ಅ.ಸಂ: 166:89 ಕಲಂ 392 ಭಾದಂಸಂ
11. ಹುಬ್ಬಳ್ಳಿ ಸಬರ್‌ಬನ್ ಪೊಲೀಸ್ ಠಾಣೆ ಅ.ಸಂ. 389:90 ಕಲಂ 306 ಭಾದಂಸಂ
12. ಗಿರಿನಗರಪೊಲೀಸ್ ಠಾಣೆ ಅ.ಸಂ. 60:90, ಕಲಂ 304 (ಬಿ) ಭಾದಂಸಂ
13. ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ, ಅ.ಸಂ:319:90 ಕಲಂ 304 (ಬಿ)ಭಾದಂಸಂ
14. ರಾಜಾಜಿನಗರ ಪೊಲೀಸ್ ಠಾಣೆ, ಅ.ಸಂ : 256:90 ಕಲಂ 304 (ಬಿ)ಭಾದಂಸಂ
15. ಎನ್.ಜೆ.ಪಾರ್ಕ ಪೊಲೀಸ್ ಠಾಣೆ, ಅ.ಸಂ.219:90, ಕಲಂ 304 (ಬಿ) ಭಾದಂಸಂ
16. ಸೌತನೂರು ಪೊಲೀಸ್ ಠಾಣೆ ಅ.ಸಂ. :90:90 ಕಲಂ 304 (ಬಿ)ಭಾದಂಸಂ
17. ಹೆಚ್.ಎ.ಎಲ್ ಪೊಲೀಸ್ ಠಾಣೆ, ಅ.ಸಂ : 77: 90, ಕಲಂ 304 (ಬಿ)ಭಾದಂಸಂ
18. ಬಸವೇಶ್ವರ ನಗರ ಪೊಲೀಸ್ ಠಾಣೆ ಅ.ಸಂ.437:90 ಕಲಂ 304 (ಬಿ) ಭಾದಂಸಂ
19. ಸಂತೆಬೆನ್ನೂರು ಪೊಲೀಸ್ ಠಾಣೆ, ಅ.ಸಂ. 10:90 ಕಲಂ 304(ಬಿ) ಭಾದಂಸಂ
0. ಮಾಗಡಿ ಪೊಲೀಸ್ ಠಾಣೆ, ಅ.ಸಂ. 189:90 ಕಲಂ 304 (ಬಿ) ಭಾದಂಸಂ

991

ರಾಂಪುಟ ಪೊಲೀಸ್ ಠಾಣೆ. ಅ.ಸಂ: 22:91 ಕಲಂ 309 ಭಾದಂಸಂ
ನಜರ್‌ಬಾದ್ ಪೊಲೀಸ್ ಠಾಣೆ, ಅ.ಸಂ :112:91 ಕಲಂ 302 ಭಾದಂಸಂ

3. ಸಿಸಿಬಿ ಪೊಲೀಸ್ ಠಾಣೆ, ಅ.ಸಂ. 134 :91, ಕಲಂ 489 (ಬಿ) (ಸಿ) ಭಾ.ದಂ.ಸಂ.
4. ಸುಬ್ರಮಣ್ಯ ಪೊಲೀಸ್ ಠಾಣೆ ಅ.ಸಂ:134 :91 ಕಲಂ 7, 12 (ಎ) (2) ಲಂಚ ವಿರೋಧ ಕಾಯಿದೆ ಮತ್ತು ಕಲಂ 3,25(1) (ಎ) ಶಸ್ತ್ರ ಕಾಯಿದೆ ಮತ್ತು 409 ಭಾದಂಸಂ
5. ಮೊಳಕಾಲ್ಮೂರು ಪೊಲೀಸ್ ಠಾಣೆ ಅ.ಸಂ: 53:91 ಕಲಂ 41(1) (ಡಿ) 102, ಹಂ.ಪ್ರ.ಸಂ : ಹಾಗೂ 412 ಭಾದಂಸಂ
6. ಗಂಡಸಿ ಪೊಲೀಸ್ ಠಾಣೆ, ಅ.ಸಂ. 19:91, ಕಲಂ ಭಾದಂಸಂ
7. ಜೋಯಿದ ಪೊಲೀಸ್ ಠಾಣೆ, ಅ.ಸಂ. 9:91 ಕಲಂ 304 (ಬಿ) ಭಾದಂಸಂ
8. ಆನೇಕಲ್ ಪೊಲೀಸ್ ಠಾಣೆ, ಅ.ಸಂ.206:91 ಕಲಂ 304(ಬಿ) ಭಾದಂಸಂ
9. ಜೋಯಿದ ಪೊಲೀಸ್ ಠಾಣೆ, ಅ.ಸಂ.25:91 ಕಲಂ, 304 (ಬಿ) ಭಾದಂಸಂ
10. ಅಫಜಲ್‌ಪುರ ಪೊಲೀಸ್ ಠಾಣೆ, ಅ.ಸಂ. 92:91 ಕಲಂ 304 (ಬಿ)ಭಾದಂಸಂ.

ಅನುಬಂಧ - 'ಸಿ'

ಸಿ.ಒ.ಡಿ. ಗೆ ವ್ಯತಿರಿಕ್ತವಾಗಿ ಬಂದಿರುವ ತೀರ್ಪುಗಳ ಬಗ್ಗೆ ಮೇಲ್ಮನವಿ ಸಲ್ಲಿಸಿರುವ ಪ್ರಕರಣಗಳು

1. ಸಾತನೂರು ಪೊಲೀಸ್ ಠಾಣೆ ಅಪರಾಧ ಸಂಖ್ಯೆ : 90 :90, ಕಲಂ 304(ಬಿ) ಭಾರತೀಯ ದಂಡ ಸಂಹಿತೆ.
2. ಜೋಯಿಡ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ : 25 :91, ಕಲಂ. 304 (ಬಿ) ಭಾರತೀಯ ದಂಡ ಸಂಹಿತೆ.

ಇನ್ನುಳಿದ ಪ್ರಕರಣಗಳು ಮೇಲ್ಮನವಿ ಸಲ್ಲಿಸಲು ಅರ್ಹವಿಲ್ಲವೆಂದು ಸಂಬಂಧಪಟ್ಟ ಅಭಿಯೋಜಕರು, ಅಭಿಯೋಗ ಉಪ ನಿರ್ದೇಶಕರು ಹಾಗೂ ನಿರ್ದೇಶಕರು ಅಭಿಪ್ರಾಯಪಟ್ಟಿರುವುದರಿಂದ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಮಾನ್ಯ ಅಧ್ಯಕ್ಷರೇ, ಸಿಓಡಿಯಲ್ಲಿ 1-1-1990 ರಿಂದ 31-12-1993ರವರೆಗೆ 6779 ಪ್ರಕರಣಗಳು ತನಿಖೆಗಾಗಿ ಇವೆ. ಅದರಲ್ಲಿ ಬಿ ರಿಪೋರ್ಟ್ ಎಷ್ಟು ಆಗಿವೆ ಅಂದರೆ, ಉತ್ತರದಲ್ಲಿ 41 ಪ್ರಕರಣಗಳು ಎಂದು ಉತ್ತರಿಸಿದ್ದಾರೆ. ಎಷ್ಟು ಪೋಲೀಸ್ ಪರವಾಗಿ ಆಗಿವೆ ಅಂದರೆ 9 ಮಾತ್ರ ಆಗಿದೆ ಎಂದು ಉತ್ತರಿಸಿದ್ದಾರೆ. 30 ಪ್ರಕರಣಗಳು ಹಾಗೆಯೇ ಹೋಗಿವೆ ಈಗ ಅದರಲ್ಲಿ 6738 ಪ್ರಕರಣಗಳು ಹಾಗೆಯೇ ಉಳಿದಿದೆ. ಇದಕ್ಕೆ ಕಾರಣವೆಂದರೆ ಸಿಓಡಿಯಲ್ಲಿ ಕೆಲವು ಅಧಿಕಾರಿಗಳು ಒಳ್ಳೆಯವರು ಏನು ಇದ್ದರು. ಅಂಥವರನ್ನು ತೆಗೆದುಬಿಟ್ಟರು. ಅಲ್ಲಿ ಏನಾಗಿದೆ ಅಂದರೆ, ಎಲ್ಲಿಯೂ ಸಲ್ಲದವರು ಅಲ್ಲಿ ಸಲುತ್ತಾರೆ ಎಂಬ ಹಾಗೆ ಇದೆ. ಎಲ್ಲಾ ಕಡೆ ಪಂಜೀತಿಯಾಗಿ ಹಾಳಾಗಿ ಬಂದವರನ್ನು ಅಲ್ಲಿ ಸೇರಿಸಿಕೊಳ್ಳುತ್ತಾರೆ. ಹಾಗೆ ನೀವುಗಳು ಅಲ್ಲಿ ಅಂಥವರನ್ನು ಸೇರಿಸಿಕೊಳ್ಳುವುದರಿಂದ ತನಿಖೆ ಕೆಲಸವು ಸರಿಯಾಗಿ ಆಗುವುದಿಲ್ಲ. ಇದು ನಮ್ಮ ಪದ್ಧತಿ ಆಗಿದೆ. ಎರಡನೆಯದಾಗಿ ಪ್ರತಿಯೊಂದು ಕೇಸ್‌ನ್ನೂ ಸಿಓಡಿಗೆ ಹಾಕುವುದು. ಗಂಡಹೆಂಡಿರ ಜಗಳವನ್ನೂ ಕೂಡ ಅಲ್ಲಿಗೇ ಹಾಕುವುದು. ಹಾಗಾಗಿ ಸುಮಾರು 6 ಸಾವಿರಕ್ಕೂ ಹೆಚ್ಚು ಕೇಸ್‌ಗಳು ಹಾಗೆಯೇ ಉಳಿದಿವೆ. ಇವುಗಳನ್ನು ಯಾವಾಗ ಪರಿಹಾರ ಮಾಡುತ್ತೀರಿ? ಅಲ್ಲಿಗೆ ಒಳ್ಳೆಯ ಅಧಿಕಾರಿಗಳನ್ನು ಹಾಕಿ ಬೇಗ ಇತ್ಯರ್ಥಪಡಿಸುವ ವಿಚಾರ ಸರಕಾರದಲ್ಲಿದೆಯೇ? ಕೆಲವು ಠಾಣೆಯಲ್ಲಿ ಸತ್ತಿರುವುದನ್ನು 'ಬಿ' ರಿಪೋರ್ಟ್ ಮಾಡಿದ್ದಾರೆ. ಹೀಗೆ 'ಬಿ' ರಿಪೋರ್ಟ್ ಮಾಡುವ ಮಹತ್ವ ಇದರಲ್ಲಿ ಇದೆಯೇ? ಈ ಬಗ್ಗೆ ತಾವು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೀರಪ್ಪ ಮೊಯ್ಲಿ : ಮಾನ್ಯ ಅಧ್ಯಕ್ಷರೆ, ಸಿಒಡಿಯ ವಿಶ್ವಾಸಾರ್ಹತೆಯ ಪ್ರಮಾಣದಲ್ಲಿ ಹೇಳುವುದಾದರೆ ಆ ಸಂಸ್ಥೆಯು ವಿಶ್ವಾಸಾರ್ಹತೆಯನ್ನು ಪಡೆದಿದೆ. ಆದರೆ ಅದನ್ನು ಬಲಪಡಿಸಬೇಕು. ಆಯ್ಕೆಗೊಂಡಂಥ ಒಳ್ಳೆಯ ಅಧಿಕಾರಿಗಳು ಅಲ್ಲಿ ಸೇರಬೇಕು. ಹಾಗೆ ವಿಶ್ವಾಸಾರ್ಹತೆಯನ್ನು ಮತ್ತೂ ಹೆಚ್ಚಿಸಲಿಕ್ಕೆ ನಾವು ಕ್ರಮ ಕೈಗೊಳ್ಳುತ್ತಾ ಇದ್ದೇವೆ. ಅಂತೆಯೇ ಈ ಬಗ್ಗೆ ಬೇರೆ ಬೇರೆ ಕಾರ್ಯಕ್ರಮಗಳನ್ನು ಕೂಡ ನಾವು ತೆಗೆದುಕೊಳ್ಳುತ್ತಾ ಇದ್ದೇವೆ. ಅದರ ವಿವರಗಳನ್ನು ನಾವು ಪ್ರತ್ಯೇಕವಾಗಿ ಕೊಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಲ್ಲಿ ವಸಂತ್ ಕುಮಾರ್ ಎಂಬ ಒಳ್ಳೆಯ ಅಧಿಕಾರಿ ಇದ್ದರು. ಹೀಗೆ ಒಳ್ಳೆಯ ಅಧಿಕಾರಿಗಳನ್ನು ಅಲ್ಲಿಂದ ತೆಗೆಯುತ್ತಾ ಇದ್ದೀರಿ. ಅಲ್ಲಿಗೆ ಕೆಲಸಕ್ಕೆ ಬಾರದವರನ್ನು ಹಾಕುತ್ತಿದ್ದೀರಿ. ಸಿಒಡಿಗೆ ಬಹಳ ಕೇಸ್ ಗಳನ್ನು ಹೋಗಿವೆ. ಏನಾದರೂ ಆದಾಗ ಅಲ್ಲಿಗೆ ಕಳುಹಿಸುತ್ತೀರಿ. ಏನೂ ಆಗಿಲ್ಲವೆಂದ ಮೇಲೆ ಪ್ರಕರಣಗಳನ್ನು ಕಳುಹಿಸುವ ಪ್ರಶ್ನೆಯೇ ಬರುವುದಿಲ್ಲ. ಅಲ್ಲಿಗೆ ಒಳ್ಳೆಯ ಅಧಿಕಾರಿಗಳನ್ನು ಹಾಕಿ ಎಂದು ಹೇಳುತ್ತಿದ್ದೇವೆ. ಇದ್ದ ಒಳ್ಳೆಯ ಅಧಿಕಾರಿಗಳನ್ನು ಚೇಂಜ್ ಮಾಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮಗೆ ತಪ್ಪು ತಿಳುವಳಿಕೆ ಇದೆ. ನಂ-2 ಯಾರು ಡಿಜಿಪಿ ಇರುತ್ತಾರೆ, ಶ್ರೀ ರಾಮಲಿಂಗಂ ಇದ್ದ ಸ್ಥಾನಕ್ಕೆ ಶ್ರೀ ವಸಂತಕುಮಾರ್ ರವರನ್ನು ಕೊಟ್ಟಿದ್ದೇವೆ.

ಕೊಲೇಸೊ ಅವರು ನಂ-3 ಬರುತ್ತಾರೆ. ಆ ಸೀನಿಯಾರಿಟಿ ಪ್ರಕಾರ ಅವರನ್ನು ಬದಲಾವಣೆ ಮಾಡಿದ್ದೇವೆಯೇ ಹೊರತು ಇಲ್ಲಿಂದ ಅಲ್ಲಿಗೆ ಬದಲಾವಣೆ ಮಾಡಬೇಕೆಂಬ ಉದ್ದೇಶದಿಂದ ಮಾಡಿಲ್ಲ. ಆದ್ದರಿಂದ ಅವರ ಸೀನಿಯಾರಿಟಿಯನ್ನು ರೆಕಾಗ್ನೈಸ್ ಮಾಡುವಾಗ ನಂಬರ್ ಸೆಕೆಂಡ್ನಲ್ಲಿ ಅಂದರೆ ರಾಮಲಿಂಗಂ ರವರ ಸ್ಥಾನಕ್ಕೆ ವಸಂತ್ಕುಮಾರ್ರವರನ್ನು ಹಾಕಿದ್ದೇವೆ. ಆದರೆ ಅದರ ಬಗ್ಗೆ ಅಪಾರ್ಥ ಮಾಡಿಕೊಳ್ಳುವುದು ಬೇಡ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಎಷ್ಟು ದಿವಸದಲ್ಲಿ ಆಗುತ್ತದೆಂದು ನಾನು ಕೇಳಿದ್ದೇನೆ. ಯಾವತ್ತು ಪರಿಹಾರ ಕೊಡುತ್ತೀರಿ?

(INTERRUPTIONS)

SRI BHIMANNA KHANDRE (Minister for Transport) : Is it possible to say? ತಾರೀಖು ಹೇಳುವುದಕ್ಕಾಗುತ್ತದೆಯೇ?

(ಗೊಂದಲ)

ಅಧ್ಯಕ್ಷರು : ಇದು ಮಹತ್ವದ ಪ್ರಶ್ನೆ ಎಂದು ನನಗೆ ಗೊತ್ತಾಗುತ್ತದೆ. ತಾವು ಕುಳಿತುಕೊಳ್ಳಿ. ನಾನು ಮುಂದಿನ ಪ್ರಶ್ನೆ ಕರೆದಿದ್ದೇನೆ. ಪ್ರಶ್ನೋತ್ತರ ಕಾಲ ಇದೆ. ಈ ರೀತಿ ಹೇಳಿದರೆ ಕಷ್ಟವಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಂತ್ರಿಗಳು ಉತ್ತರ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಹೇಳಲಿ.

ಅಧ್ಯಕ್ಷರು : ಮಂತ್ರಿಗಳು ಮತ್ತು ಸದಸ್ಯರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಪ್ರಶ್ನೋತ್ತರ ಕಾಲ ಬಹಳ ಮಹತ್ವದ್ದು ಇರುತ್ತದೆ. ಈ ಸಮಯದಲ್ಲಿ ಇಲ್ಲಿ ಸದಸ್ಯರು, ಮಂತ್ರಿಗಳ ಹತ್ತಿರ ಹೋಗಿ ತಮ್ಮ ಕೆಲಸಗಳ ಬಗ್ಗೆ ಕೇಳದೆ ನಂತರ ಕೇಳಿಕೊಳ್ಳುವುದು ಪರವಾಗಿಲ್ಲ. ಮಂತ್ರಿಗಳು ಸಹ ಈ ಕಡೆ ಗಮನ ಕೊಡದಿದ್ದರೆ ನನಗೆ ಕಷ್ಟವಾಗುತ್ತದೆ. ಆದ್ದರಿಂದ ಎಲ್ಲರೂ ನನಗೆ ಸ್ವಲ್ಪ ಸಹಕಾರ ಕೊಡಬೇಕೆಂದು ವಿನಂತಿಸುತ್ತೇನೆ.

ಪ್ರಶ್ನೆ ಸಂಖ್ಯೆ 102

ಶ್ರೀ ಕೆ. ಲಕ್ಷ್ಮಣ್ಣ : ನನಗೆ ಉತ್ತರ ಬಂದಿಲ್ಲ.

Sri N.G. Halappa : This question may be taken up tomorrow.

ಅಧ್ಯಕ್ಷರು : ಇದು ಈಗಾಗಲೇ ಮುಂದೂಡಿದ ಪ್ರಶ್ನೆ.

ಶ್ರೀ ಎನ್.ಜಿ. ಹಾಲಪ್ಪ : ಇದು ಹೆಚ್‌ಯುಡಿಗೆ ಹೋಗಬೇಕೆಂದು ಬರೆದು ಕಳುಹಿಸಿದ್ದೇನೆ. I am not ready. Tomorrow I will answer.

ಅಧ್ಯಕ್ಷರು : ಇದರ ಬಗ್ಗೆ ತಾವು ಗಮನ ಕೊಡಬೇಕು.

ಶ್ರೀ ಎನ್. ಜಿ. ಹಾಲಪ್ಪ : ಆಗಬಹುದು.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಹೊನ್ನಾಳಿಯಲ್ಲಿ ಉಪಖಜಾನೆಯನ್ನು ತೆರೆಯುವುದರ ಬಗ್ಗೆ.

221 - ಶ್ರೀ ಡಿ.ಜಿ. ಗಂಗಪ್ಪ (ಹೊನ್ನಾಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನ ನ್ಯಾಮತಿಯಲ್ಲಿ ಸಬ್ ಟ್ರೆಜರಿ ಪ್ರಾರಂಭಿಸಲು ಸರ್ಕಾರದಿಂದ ಕ್ರಮ ಕೈಗೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯ್ಲಿ(ಮುಖ್ಯಮಂತ್ರಿಗಳು)

ಅ) ಹೌದು

ಆ) ಸರ್ಕಾರವು ಉಪ ಖಜಾನೆ ತೆರೆಯಲು ಕ್ರಮ ಜರುಗಿಸಿದ್ದು, ಬೇಕಾದ ಮಾಹಿತಿ ಸಂಗ್ರಹಣ ಮಾಡಲಾಗಿ, ಈ ಗ್ರಾಮದಲ್ಲಿ ಇರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯು ಖಜಾನೆ ವಹಿವಾಟನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿದುದರ ಮೇರೆಗೆ ಸದ್ಯಕ್ಕೆ ಉಪಖಜಾನೆ ತೆರೆಯುವ ವಿಚಾರ ಮುಂದೂಡಲಾಗಿದೆ.

ಶ್ರೀ ಡಿ. ದೇವರಾಜ್ ಅರಸ್‌ರವರ ಪ್ರತಿಮೆಯ ಸ್ಥಾಪನೆ

298 - ಶ್ರೀ ಆರ್.ವಿ.ದೇವರಾಜ್ (ಚಾಮರಾಜಪೇಟೆ) : ಮಾನ್ಯ ಮುಖ್ಯಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ವಿಧಾನ ಸೌಧದ ಮುಂದೆ ದಿವಂಗತ ದೇವರಾಜ ಅರಸುರವರ ಪ್ರತಿಮೆಯನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆಯೇ?

ಆ) ಈ ಪ್ರತಿಮೆಯನ್ನು ಸ್ಥಾಪಿಸಲು ಸೂಕ್ತ ಸ್ಥಳವನ್ನು ಗುರುತಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಎಲ್ಲಿ ಮತ್ತು ಯಾವಾಗ ಈ ಪ್ರತಿಮೆಯನ್ನು ಸ್ಥಾಪಿಸಲಾಗುವುದು?

ಈ) ಆ ಪ್ರತಿಮೆಯನ್ನು ನಿರ್ಮಿಸಲು ಕೈಗೊಂಡ ಕ್ರಮಗಳೇನು?

ಉ) ಅದಕ್ಕಾಗಿ ತಗಲುವ ಅಂದಾಜು ವೆಚ್ಚವೆಷ್ಟು?

ಊ) 1994ರ ದೇವರಾಜ ಅರಸುರವರ ಜನ್ಮ ದಿವಸದ ವೇಳೆಗೆ ಆ ಪ್ರತಿಮೆಯ ಅನಾವರಣ ಏರ್ಪಡಿಸಲಾಗುವುದೇ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಹೌದು

ಆ) ಹೌದು.

ಇ) ಗೋಪಾಲಗೌಡ ವೃತ್ತದಿಂದ ಬಸವೇಶ್ವರ ವೃತ್ತದ ಮೂಲಕ ಹಾದು ಹೋಗುವ ಮುಖ್ಯ ರಸ್ತೆಯಲ್ಲಿ ಮಹಾಲೇಖಪಾಲರ ಕಛೇರಿ ಇರುವ ಹಾಗೂ